ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು	:	ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	918(977)
ಉತ್ತರಿಸುವ ಸಚಿವರು	:	ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು
ಉತ್ತರಿಸಬೇಕಾದ ದಿನಾಂಕ	:	13.03.2020

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ಪ್ರಸ್ತುತ ಇರುವ ಕೈಮಗ್ಗಗಳ ಸಂಖ್ಯೆ ಎಷ್ಟು;(ಜಿಲ್ಲಾವಾರು ಮಾಹಿತಿ ನೀಡುವುದು)	2019-20ನೇ ಸಾಲಿನ ಕೇಂದ್ರ ಸರ್ಕಾರದ 4ನೇ ಕೈಮಗ್ಗ ಗಣತಿ ಪ್ರಕಾರ ರಾಜ್ಯದಲ್ಲಿ 29377 ಕೈಮಗ್ಗಗಳು ಇರುತ್ತವೆ. ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1**ರಲ್ಲಿ ಒದಗಿಸಿದೆ.
(ಆ)	ಇದುವರೆಗೆ ರಾಜ್ಯದಲ್ಲಿ ಎಷ್ಟು ನೇಕಾರರ ಸಾಲ ಮನ್ನಾ ಮಾಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)	2017-18 ರಿಂದ ಈವರೆವಿಗೆ ರಾಜ್ಯದಲ್ಲಿ 18747 ಅರ್ಹ ನೇಕಾರರ ರೂ.58,58,97,662/-ಗಳ ಸಾಲ ಮನ್ನಾ ಮಾಡಲಾಗಿದೆ. ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-2**ರಲ್ಲಿ ಒದಗಿಸಿದೆ.
(ಇ)	ಕೈಮಗ್ಗ ವಸ್ತುಗಳ ಮಾರಾಟದ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮಗಳೇನು?	• ಕೈಮಗ್ಗ ನೇಕಾರರ ಸಹಕಾರ ಸಂಘಗಳು ಹಾಗೂ ಕೈಮಗ್ಗ ಮಹಾಮಂಡಳಗಳು ವರ್ಷದ 365 ದಿನಗಳಿಗೆ (ವರ್ಷ ಪೂರ್ತಿ)ಮಾರಾಟ ಮಾಡಿದ ಕೈಮಗ್ಗ ಉತ್ಪನ್ನಗಳಿಗೆ ಶೇ.20 ರಿಬೇಟ್-ಅನ್ನು ರಾಜ್ಯ ಸರ್ಕಾರದ ವತಿಯಿಂದ ಮರುಪಾವತಿಸಲಾಗುತ್ತಿದೆ. • ಕೈಮಗ್ಗ ಉತ್ಪನ್ನಗಳಿಗೆ ಮಾರುಕಟ್ಟೆ ಕಲ್ಪಿಸಲು ರಾಜ್ಯದ ಪ್ರಮುಖ ಹಬ್ಬಗಳು ಹಾಗೂ ರಾಷ್ಟ್ರೀಯ ದಿನಾಚರಣೆ ಸಂದರ್ಭಗಳಲ್ಲಿ ವಿಶೇಷ ಕೈಮಗ್ಗ ಮೇಳಗಳನ್ನು ಆಯೋಜಿಸಲಾಗುತ್ತಿದೆ. • ಕೈಮಗ್ಗ ನೇಕಾರರ ಸಹಕಾರ ಸಂಘಗಳ ಉತ್ಪನ್ನಗಳ ಮಾರಾಟವನ್ನು ಉತ್ತೇಜಿಸಲು ಸಂಘದಲ್ಲಿ ಹಾಲಿ ಇರುವ ಮಾರಾಟ ಮಳಿಗೆಗಳನ್ನು ಉನ್ನತೀಕರಿಸಲು ಹಾಗೂ ಕೈಮಗ್ಗ ನೇಕಾರರಿಗೆ ವೈವಿಧ್ಯಮಯ ವಿನ್ಯಾಸಗಳನ್ನು ನೀಡಲು ವಿನ್ಯಾಸ ಅಭಿವೃದ್ಧಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ. • ಕೈಮಗ್ಗ ನೇಕಾರರ ಕುರಕುಶಲತೆಯನ್ನು ಇನ್ನಷ್ಟು ಅಭಿವೃದ್ಧಿಪಡಿಸಿ, ರಾಜ್ಯಕ್ಕೆ ಸೀಮಿತವಾದ ಜಿ.ಐ ಟ್ಯಾಗ್ ಹೊಂದಿರುವ ಕೈಮಗ್ಗ ಬಟ್ಟೆ ಉತ್ಪನ್ನಗಳಿಗೆ ರಾಜ್ಯದ ಪ್ರತಿಷ್ಠಿತ "ಪ್ರಿಯದರ್ಶಿನಿ ಬ್ರಾಂಡ್" ಮೂಲಕ ಸೂಕ್ತ ಮಾರುಕಟ್ಟೆ ಒದಗಿಸಲಾಗುತ್ತಿದೆ. • ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಡಿಸೈನ್ (NID) ಇವರ ಮೂಲಕ ಮಾರುಕಟ್ಟೆ ಬೇಡಿಕೆಗೆ ಅನುಗುಣವಾಗಿ ನೇಕಾರರಿಗೆ ಹೊಸ ವಿನ್ಯಾಸ ಮತ್ತು ತಂತ್ರಜ್ಞಾನ ವರ್ಗಾವಣೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಸಂ: ವಾಕೈ 72 JAKE 2020

(ಶ್ರೀಮಂತ ಬಾಳಾಸಾಹೇಬ ಪಾಟೀಲ್)
ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

ಅನುಬಂಧ-1

2019-20 ನೇ ಸಾಲಿನ ಕೇಂದ್ರ ಸರ್ಕಾರದ 4ನೇ ಕೈಮಗ್ಗ ಗಣತಿ ಪ್ರಕಾರ ಜಿಲ್ಲಾವಾರು ಮಾಹಿತಿ

ಕ್ರ.ಸಂ	ಜಿಲ್ಲೆಗಳ ಹೆಸರು	ಕೈಮಗ್ಗಗಳ ಸಂಖ್ಯೆ
1	ಬಾಗಲಕೋಟೆ	6319
2	ಬೆಂಗಳೂರು ನಗರ	1184
3	ಬೆಂಗಳೂರು ಗ್ರಾಮಾಂತರ	194
4	ಬೆಳಗಾವಿ	1341
5	ಬಳ್ಳಾರಿ	1239
6	ಬೀದರ್	3032
7	ವಿಜಯಪುರ	732
8	ಚಾಮರಾಜನಗರ	883
9	ಚಿಕ್ಕಬಳ್ಳಾಪುರ	929
10	ಚಿಕ್ಕಮಗಳೂರು	202
11	ಚಿತ್ರದುರ್ಗ	3132
12	ದಕ್ಷಿಣ ಕನ್ನಡ	34
13	ಧಾವಣಗೆರೆ	130
14	ಧಾರವಾಡ	368
15	ಗದಗ	1431
16	ಕಲಬುರಗಿ	358
17	ಹಾಸನ	397
18	ಹಾವೇರಿ	1850
19	ಕೊಡಗು	60
20	ಕೋಲಾರ	170
21	ಕೊಪ್ಪಳ	879
22	ಮಂಡ್ಯ	111
23	ಮೈಸೂರು	10
24	ರಾಯಚೂರು	15
25	ರಾಮನಗರ	65
26	ಶಿವಮೊಗ್ಗ	14
27	ತುಮಕೂರು	3730
28	ಉಡುಪಿ	37
29	ಉತ್ತರ ಕನ್ನಡ	23
30	ಯಾದಗಿರಿ	508
	ಒಟ್ಟು	29377

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು, ಕೈಮಗ್ಗ ಮತ್ತು ಜವಳಿ

ಅನುಬಂಧ-2

2017-18 ರಿಂದ ಈವರೆಗಿನ ನೇಕಾರರ ಸಾಲ ಮನ್ನಾ ಯೋಜನೆಯ ಜಿಲ್ಲಾವಾರು ಮಾಹಿತಿ			
ಕ್ರ.ಸಂ	ಜಿಲ್ಲೆ	ಅರ್ಹ ನೇಕಾರ ಫಲಾನುಭವಿಗಳ ಸಂಖ್ಯೆ	ಬಿಡುಗಡೆ ಮಾಡಲಾದ ಮೊತ್ತ (ರೂ.ಗಳಲ್ಲಿ)
1	ಬಾಗಲಕೋಟೆ	14477	413683113
2	ವಿಜಯಪುರ	968	33791012
3	ತುಮಕೂರು	129	4907485
4	ಗದಗ	211	6719815
5	ಬೆಳಗಾವಿ	2734	122528023
6	ಕೊಪ್ಪಳ	195	3083869
7	ಉಡುಪಿ	26	807479
8	ಧಾರವಾಡ	7	376866
	ಒಟ್ಟು	18747	585897662

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು, ಕೈಮಗ್ಗ ಮತ್ತು ಜವಳಿ